

# ಮರಳುಗಾಡಿನ ಜಲಕನ್ನಿಕೆ

★ ವಸುಮತಿ ಉಡುಪ
ಚಿತ್ರ: ರಾಘವೇಂದ್ರ ಉಡುಪ

ರಾಜಸ್ಥಾನದ ಜೈಸಲ್ಮೇರ್ ಅಂದರೆ ಮರಳುಗಾಡು ಎಂದೇ ಪ್ರಸಿದ್ಧ. ತಲುಪುವ ದಾರಿಯುದ್ದಕ್ಕೂ ಅತ್ತಿತ್ತಲಿನ ಜಾಲಿಕಂಟಿ ಬೆಳೆದ ಸಮತಟ್ಟಿನ ಬಯಲುಗಳಾಚೆ ಉದ್ದಾನುದ್ದಕ್ಕೆ ಕಂಡುಬರುವುದು ಬರೀ ಮರಳಿನ ಗುಡ್ಡಗಳು. ಥಾರ್ ಮರುಭೂಮಿ ಎಂದರೆ ಏಷ್ಯಾದಲ್ಲೇ ಪ್ರಸಿದ್ಧ.

ಇಂತಹ ಮರುಭೂಮಿಯಲ್ಲೂ ನೀಲ ಜಲರಾಶಿಯಿಂದ ಕಂಗೊಳಿಸುವ ಒಂದು ಸರೋವರವಿದೆ. ಸರೋವರದಲ್ಲಿ ಚಿನ್ನಾಟವಾಡುವ ದೊಡ್ಡ ಗಾತ್ರದ ಮೀನುಗಳ ಸಂತೆ ಇದೆ. ಇವುಗಳಿಗೆ ಮಂಡಕ್ಕಿ ಎಸೆದು ಅವು ಗುಂಪುಗೂಡುವುದನ್ನು ನೋಡಲು ಸೇರುವ ಕುತೂಹಲಿಗಳಿದ್ದಾರೆ. ಅವರ ಉತ್ಸಾಹ ತಣಿಸುವ ಪುರಿ ಮಾರಾಟಗಾರರಿದ್ದಾರೆ. ಸರೋವರದ ದಡದಲ್ಲಿ ಸ್ವಚ್ಛಂದವಾಗಿ ವಿಹರಿಸುವ ಬಾತುಕೋಳಿಗಳಿವೆ. ದಡದಲ್ಲಿ ತಣ್ಣೆಳಲಿನ ಬೃಹತ್ ಮರಗಳಿವೆ. ಕುಸುರಿಗೆಲಸದ ಮಂಟಪಗಳಿವೆ.

ಜೈಸಲ್ಮೇರ್ ಅಂದರೆ ನೀರಿಗೆ ತತ್ವಾರವಾಗಿರುವ ಸುಡುಮರಳಿನ ಭೂಮಿ ಎಂದು ನಾವು ಅಂದುಕೊಂಡಿದ್ದು ಅಲ್ಲಿ ಸುಳ್ಳಾಗಿತ್ತು. ದಕ್ಷಿಣ ಭಾರತದ ನಮಗೆ ನಿಜಕ್ಕೂ

